# ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಂ ಎಫ್ ಸಿ, ಧಾರವಾಡ

**ಸಿಸಿ ನಂ.187/2023**

ಪಿರ್ಯಾದುದಾರರುಃ ಪಿ ಎಸ್ ಐ , ಗ್ರಾಮೀಣ ಪೋಲಿಸ ಠಾಣೆ, ಧಾರವಾಡ.

**ವಿರುದ್ಧ**

ಆರೋಪಿತರುಃ ಸಲ್ಮಾನಖಾನ ರಫೀಕ ಉರ್ಫ ರಫೀಕಸಾಬ ಶೇಖ
ವಯಾಃ 30 ವರ್ಷ ಉಃ ಚಾಲಕ ವೃತ್ತಿ
ಸಾಃ ಗೋಕಾಕ , ಬೆಳಗಾವಿ

**-ಃ ಆಪಾದನೆ ಃ-**

ದಿಃ 08.02.2022 ರಂದು ಬೆಳಿಗ್ಗೆ 8.30 ಗಂಟೆಯ ಸುಮಾರಿಗೆ ಧಾರವಾಡ ಗ್ರಾಮೀಣ ಪೋಲೀಸ ಠಾಣೆ ಸರ ಹದ್ದಿಯ ಧಾರವಾಡ ಸವದತ್ತಿ ರಸ್ತೆಯ ಮೇಲೆ ಹಾರೋಬೆಳವಡಿ ಸಮೀಪ ಎಲ್ ಎನ್ ಟಿ ಕಂಪನಿ ಹತ್ತಿರ ಆರೋಪಿಯಾದ ನೀವು ನಿಮ್ಮ ಬಾಬ್ತು ಮಹಿಂದ್ರಾ ಕಂಪನಿ ಬುಲೇರೋ ಪಿಕಅಪ್ ವಾಹನ ಕೆಎ.49/5874 ನೇದ್ದನ್ನು ಧಾರವಾಡ ಕಡೆಯಿಂದ ಸವದತ್ತಿ ಕಡೆಗೆ ಅತೀ ವೇಗ ಹಾಗೂ ನಿಕ್ಷಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ಅದೇ ಮಾರ್ಗವಾಗಿ ನಿಮ್ಮ ಮುಂದೆ ಅಮ್ಮಿನಬಾವಿ ಕಡೆಯಿಂದ ಹಾರೊಬೆಳವಡಿ ಕಡೆಗೆ ಹೊರಟ್ಟಿದ್ದ ಜೊಡೆತ್ತಿನ ಚಕ್ಕಡಿಗೆ ಡಿಕ್ಕಿ ಮಾಡಿ ಕೆಡವಿ ಅಪಘಾತಮಾಡಿದ್ದು **ಭಾರತೀಯ ದಂಡ ಸಂಹಿತೆ ಕಲಂ.279** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

ಎರಡನೇಯದಾಗಿ , ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಪಘಾತಪಡಿಸಿದ ಪರಿಣಾಮ ಸದರಿ ಅಪಘಾತದಲ್ಲಿ ಚಾಸಾ8 ಮತ್ತು 9 ಹಾಗೂ ಎರಡು ಎತ್ತುಗಳಲಿ ಸಾದಾ ವ ಭಾರಿ ಸ್ವರೂಪದ ಗಾಯಪಡಿಸಿದ್ದು **ಭಾರತೀಯ ದಂಡ ಸಂಹಿತೆ ಕಲಂ.337 ಮತ್ತು 338** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

ಮೂರನೇಯದಾಗಿ, ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಪಘಾತಪಡಿಸಿದ ಪರಿಣಾಮ ಸದರಿ ಅಪಘಾತದಲ್ಲಿ ಚಕ್ಕಡಿಯ ಸವಾರ ಗೂಳಪ್ಪ ಧನಸಣ್ಣನವರ

ರವರಿಗೆ ತೀವ್ರ ಸ್ವರೂಪದ ಗಾಯಪಡಿಸಿ ಮೃತ ಪಡುವಂತೆ ಮಾಡಿದ್ದು, **ಭಾರತೀಯ ದಂಡ ಸಂಹಿತೆ ಕಲಂ. 304 ಎ** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

ಕೊನೇಯದಾಗಿ , ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಪಘಾತ ಪಡಿಸಿದ ವಿಷಯವನ್ನು ಪೋಲಿಸ ಠಾಣೆಗೆ ತಿಳಿಸದೇ ಹಾಗೂ ಗಾಯಳುಗಳನ್ನು ಉಚಪರಿಸದೇ ವಾಹನ ಸಮೇತರಾಗಿ ಪರಾರಿಯಾಗಿದ್ದು, **ಮೋಟಾರು ವಾಹನ ಕಾಯ್ದೆ ಕಲಂ.134 ಸಹ ಕಲಂ.187** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

ಪ್ರಶ್ನೇಃ- ಈಗ ಓದಿ ಹೇಳಿದ ಆಪಾದನೆ ತಿಳಿಯಿತೆ ?

ಉತ್ತರಃ-

ಪ್ರಶ್ನೆಃ ತಪ್ಪು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ ?

ಉತ್ತರಃ

**( ಸದರಿ ಆಪಾದನೆಯನ್ನು ಆರೋಪಿಗೆ ಓದಿ ತಿಳಿಸಿ, ಅವರು ಕೊಟ್ಟ ಸಂಪೂರ್ಣ ಹಾಗೂ ಸರಿಯಾದ ಉತ್ತರವನ್ನು ಅಭಿಲೇಖಿಸಿಕೊಳ್ಳಲಾಗಿದೆ.)**

ದಿನಾಂಕ 18.04.2023.
ಧಾರವಾಡ.

4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ